ರವಾನೆ ಸಂಖ್ಯೆ: 2950:2017.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು, ಮಡಿಕೇರಿ,
ದಿನಾಂಕ: 20ನೇ ಸೆಪ್ಟೆಂಬರ್ 2017.

# ಅಧಿಸೂಚನೆ

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂ: 2368/2011 ಕುರಿತಂತೆ ದಿ: 09.02.2017 ರಂದು ನೀಡಿದ ತೀರ್ಪಿನನ್ವಯ ಕೊಡಗು ಜಿಲ್ಲಾ ನ್ಯಾಯಾಂಗ ಘಟಕದ ನೌಕರರ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:-೧. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂ:2368/2011 ಬಿ.ಕೆ.ಪವಿತ್ರ ಮತ್ತು ಇತರರ ವಿರುದ್ದ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ನೀಡಿದ ತೀರ್ಪಿನ ಆದೇಶ ದಿ: 09.02.2017.

೨. ಸರ್ಕಾರದ ಆದೇಶ ಡಿಪಿಎಆರ್ 182 ಎಸ್.ಆರ್.ಆರ್.2011, ದಿ: 06.05.2017.

೩. ಗೌರವಾನ್ವಿತ ಉಚ್ಚ ನ್ಯಾಯಾಲಯದ ಪತ್ರ ಸಂ: ಎಲ್‌ಸಿಎ-II-118/2017, ದಿ:11.05.2017 ಮತ್ತು 14.09.2017

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಿ.ಕೆ.ಪವಿತ್ರ ಮತ್ತು ಇತರರ ವಿರುದ್ದ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂ: 2368/2011 ಹಾಗೂ ಸಿವಿಲ್ ಅಪೀಲು ಸಂ: 2369/2011, 2370-2373/2011, 2374-2377/2011, 2378/2011, 2379/2011, 4320-4327/2011 ಮತ್ತು 5280-5286/2011 ರಲ್ಲಿ ದಿ: 09.02.2017 ರಂದು ನೀಡಿರುವ ತೀರ್ಪಿನಲ್ಲಿ Karnataka Determination of seniority of the Government Servants Promoted on the basis of Reservation (to the posts in the civil services of the state) Act, 2002 ರ ಸೆಕ್ಷನ್ 3 ಮತ್ತು 4 ನ್ನು "ultra vires Articles 14 and 16 of the Constitution" ಎಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

" In view of the above, we allow these appeals, set aside the impugned judgement and declare the provisions of the impugned Act to the extent of doing away with the "Catchup" rule and providing for consequential Seniority under

section 3 and 4 to persons belonging to SCs and STs on promotion against roaster points to be ultra vires Articles 14 and 16 of the Constitution. The judgement will not affect those who have already retired and will not affect financial benefits already taken. Consequential promotions granted to serving employees, based on consequential seniority benefit, will be treated as ad hoc and liable to be reviewed.

ಈ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಃ 2368/2011 ಕುರಿತಂತೆ ದಿಃ 09.02.2017 ರಂದು ನೀಡಿದ ಮಾರ್ಗಸೂಚಿಯನ್ವಯ ಮತ್ತು ಉಲ್ಲೇಖ-2ರಲ್ಲಿ ಸರ್ಕಾರದ ಆದೇಶದಲ್ಲಿ ತಿಳಿಸಿದ ಮಾರ್ಗಸೂಚಿಗಳನುಸಾರ ಕೊಡಗು ಜಿಲ್ಲಾ ನ್ಯಾಯಾಂಗ ಘಟಕದ ನೌಕರರ ದಿಃ 24.07.1978 ರಿಂದ 30.06.2017 ರವರೆಗಿನ ಹುದ್ದೆಗಳಾದ ಶಿರಸ್ತೇದಾರರು, ಶೀಘ್ರಲಿಪಿಗಾರರು, ಹಿರಿಯ ಬೆರಳಚ್ಚುಗಾರರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು/ಬೆರಳಚ್ಚುಗಾರರು/ನಕಲು-ಬೆರಳಚ್ಚುಗಾರರು, ಅಮೀನರು, ಆದೇಶಿಕ ಜಾರಿಕಾರರು, ಚಾಲಕರು, ಅಟೆಂಡರ್ ಮತ್ತು ಸೇವಕರ ಜೇಷ್ಟತಾ ಪಟ್ಟಿಯನ್ನು ಪುನರಾವಲೋಕಿಸಿ ಪರಿಷ್ಕೃತ ಜೇಷ್ಟತಾ ಪಟ್ಟಿಯನ್ನು ಕೊಡಗು ಜಿಲ್ಲಾ ನ್ಯಾಯಾಂಗ ಘಟಕದ ವೆಬ್‌ಸೈಟ್ http://ecourts.gov.in/kodagu ನಲ್ಲಿ ಪ್ರಕಟಿಸಿದೆ.

ಸದರಿ ಪರಿಷ್ಕೃತ ತಾತ್ಕಾಲಿಕ ಜೇಷ್ಟತಾ ಪಟ್ಟಿ ಕುರಿತು ಆಕ್ಷೇಪಣೆಗಳು/ ಸಲಹೆಗಳಿದ್ದಲ್ಲಿ ಭಾದಿತರಾದವರು ಅವರುಗಳ ಆಕ್ಷೇಪಣೆ/ಸಲಹೆಯನ್ನು ಈ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿದ 15 (ಹದಿನೈದು) ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ತಮ್ಮ ವಿಶ್ವಾಸಿ,
Sd/-
(ಮಾಸ್ಟರ್ ಆರ್‌ಕೆಜಿಎಂಎಂ ಮಹಾಸ್ವಾಮೀಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.